# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಮಹಾಂತಮ್ಮ ಅಧ್ಯಕ್ಷರು, ಬಿಚ್ಚಾಲಿ ಗ್ರಾಮ ಪಂಚಾಯಿತಿ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ ಇವರು ಹಾಗೂ 14 ಜನ ಚುನಾಯಿತ ಸದಸ್ಯರುಗಳ ಸದಸ್ಯತ್ವ ತೆಗೆದುಹಾಕುವ ಕುರಿತು ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 1135 ಗ್ರಾಪಂಅ 2018, ದಿನಾಂಕ:02.02.2019.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರಾಯಚೂರು ಇವರ ಪತ್ರ ಸಂಖ್ಯೆ: ಜಿಪರಾ/ಪರಿಷತ/ಎ.ಬಿಚ್ಚಾಲಿ/2018-19/2966, ದಿನಾಂಕ:24.12.2018.
3. ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ಪತ್ರ ಸಂಖ್ಯೆ: ಕಂ/ಪ್ರಾಆಕ/ಜಿಪಂ/136/2018-19/1025, ದಿನಾಂಕ:10.06.2019.

**ಪ್ರಸ್ತಾವನೆ:**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು 48(4) ಮತ್ತು 48(5) ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಮೇಲೆ ದಾಖಲಾಗುವ ದೂರುಗಳಿಗೆ ಸಂಬಂಧಿಸಿದಂತೆ ಅರೆನ್ಯಾಯಿಕ ಮಾದರಿಯಲ್ಲಿ ವಿಚಾರಣೆ ನಡೆಸುವ ಅಧಿಕಾರವನ್ನು ಸಂಬಂಧಿಸಿದ ಕಂದಾಯ ವಿಭಾಗಗಳ ಪ್ರಾದೇಶಿಕ ಆಯುಕ್ತರುಗಳಿಗೆ ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ:02.02.2019 ರಲ್ಲಿ ವಹಿಸಿ, ಸರ್ಕಾರವು ಆದೇಶಿದೆ.

ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ, ಬಿಚ್ಚಾಲಿ ಗ್ರಾಮ ಪಂಚಾಯಿತಿ, ಈ ಕೆಳಕಂಡ 15ಜನ ಸದಸ್ಯರುಗಳು 2016-17ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯಡಿ ತಮ್ಮ, ಗಂಡ, ಮಾವ, ವೈಯಕ್ತಿಕ ಹೆಸರಿನಲ್ಲಿ (ತಮ್ಮ ಸಂಬಂಧಿಕರ) ಹಾಗೂ ವೈಯಕ್ತಿಕ ಹೆಸರಿನಲ್ಲಿ ಚೆಕ್ ಪಡೆದು, ಹಣದುರುಪಯೋಗ ಮಾಡಿ ನಿಯಮ ಬಾಹಿರವಾಗಿ ಕರ್ತವ್ಯ ನಿರ್ವಹಿಸಿ, ಸ್ವಜನಪಕ್ಷಪಾತ, ಆಧಿಕಾರ ದುರ್ಬಳಕೆ ಮತ್ತು ಅನೇಕ ಅವ್ಯವಹಾರಗಳನ್ನು ಮಾಡಿರುವುದರಿಂದ ಇವರಗಳ ವಿರುದ್ಧ ಶ್ರೀ ದೇವೆಂದ್ರ ಸಮಾಜ ಸೇವಕ, ಸಾ॥ ಬಿಚ್ಚಾಲಿ, ತಾ॥ಜಿ॥ರಾಯಚೂರು ಇವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರಾಯಚೂರು ಇವರಿಗೆ ದೂರು ಸಲ್ಲಿಸಿದ್ದು ಈ ಪ್ರಕರಣದ ವಿಚಾರಣೆಯನ್ನು ನಡೆಸಿ ವರದಿ ಸಲ್ಲಿಸುವಂತೆ ಓದಲಾದ (2)ರ ಪತ್ರದಲ್ಲಿ ತಿಳಿಸಿರುತ್ತಾರೆ.

ಓದಲಾದ (3)ರ ಪತ್ರದ ಜೊತೆ ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರು ಈ ಪ್ರಕರಣದ ವಿಚಾರಣ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದು ಪರಿಶೀಲಿಸಲಾಗಿ ಈ ಪ್ರಕರಣದಲ್ಲಿ ಅಂದರೆ ಬಿಚ್ಚಾಲಿ ಗ್ರಾಮ ಪಂಚಾಯಿತಿಯ ಸದಸ್ಯರುಗಳು ತಮ್ಮ ಸ್ವಂತ ಹೆಸರಿನಲ್ಲಿ ಮತ್ತು ಸಂಬಂಧಿಕರ ಹೆಸರಿನಲ್ಲಿ ಚೆಕ್ ಪಡೆದು ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಣದ 43(ಎ)(1)(v)ನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದು ತಿಳಿಸಿದ್ದು ಈ ಪ್ರಕಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಪ್ರಾದೇಶಿಕ ಆಯುಕ್ತರು ಕಳುಹಿಸಿರುವ ವಿಚಾರಣಾ ವರದಿಯಲ್ಲಿ ಆರೋಪಿತರ 15ಜನ ಸದಸ್ಯರುಗಳ ಹೆಸರುಗಳು ಈ ಕೆಳಕಂಡಂತೆ ಇರುತ್ತವೆ.

**1) ಶ್ರೀಮತಿ ಸುಜಾತ 2) ವೀರನ ಗೌಡ 3) ಶ್ರೀಮತಿ ಕಾಮಕ್ಷಮ್ಮ 4) ಶ್ರೀ ಮಲ್ಲೇಶ್ 5) ದೌಲತ್ ಸಾಬ್ 6) ಶ್ರೀ ಹನುಮಂತ 7) ಶ್ರೀ ಕರಿಬಸಪ್ಪ 8) ಶ್ರೀಮತಿ ಸುಶೀಲಮ್ಮ 9) ಶ್ರೀಮತಿ ಜಯಶೀಲ 10) ಶ್ರೀ ರಮೇಶ್ 11) ಶ್ರೀಮತಿ ಅಮೀನಾ ಬೇಗಂ 12) ಶ್ರೀಮತಿ ಪಾರ್ವತಮ್ಮ 13) ಶ್ರೀಮತಿ ಹುಲಿಗೆಮ್ಮ ಮತ್ತು 14) ಶ್ರೀಮತಿ ಯಲ್ಲಮ್ಮ ಉಪಾಧ್ಯಕ್ಷರು 15)ಶ್ರೀಮತಿ ಮಹಾಂತಮ್ಮ ಅಧ್ಯಕ್ಷರು,** ಇವರುಗಳಲ್ಲಿ 8 ಜನ ಸದಸ್ಯರುಗಳು ತಮ್ಮ ಸ್ವಂತ ಹೆಸರಿನಲ್ಲಿ ಮತ್ತು ಸಂಬಂಧಿಕರ

ಹೆಸರಿನಲ್ಲಿ ಚೆಕ್ ಮೂಲಕ ಪಡೆದಿರುವ ಹಣವನ್ನು ನಂತರ ಡಿಡಿ ಮೂಲಕ ಗ್ರಾಮ ಪಂಚಾಯತ್ ಶಾಖೆಗೆ ಜಮಾ ಮಾಡಿರುವುದಾಗಿ ವಿಚಾರಣಾಸಮಯದಲ್ಲಿ ತಿಳಿಸಿದ್ದಾರೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರಸಂ | ವಿವರ | ರೂಪಾಯಿಗಳು |
|---|---|---|
| 1 | ಶ್ರೀ ಮಲ್ಲೇಶ್ ಬಿನ್ ಹನುಮಂತ | 9,400/-. |
| 2 | ಶ್ರೀ ವೀರನಗೌಡ ಬಿನ್ ನಾಗನಗೌಡ | 17,200/- |
| 3 | ಶ್ರೀ ಹನುಮಂತ ಬಿನ್ ಕೀಲಿಗೋಪಾಲ | 8,000/-. |
| 4 | ಶ್ರೀಮತಿ ಜಯಶೀಲ ಬಿನ್ ಸುಧೀರ | 3,600/-. |
| 5 | ಶ್ರೀಮತಿ ಕಾಮಕ್ಷಮ್ಮ ಗಂಡ ಕುಬೇರಪ್ಪ | 7,900/-ಆದರೆ,ಇವರು ರೂ.10,900/ ಗಳನ್ನು ಪಡೆದಿದ್ದರು ಉಳಿದ ಹಣ ರೂ.3,000/- ಗಳನ್ನು ಜಮಾ ಮಾಡಿರುವುದಿಲ್ಲ. |
| 6 | ಶ್ರೀ ಕರಿಬಸಪ್ಪ | 16,700/-. |
| 7 | ಶ್ರೀ ರಮೇಶ ಬಿನ್ ಭವಾನಿ | 3,100/-. |
| 8 | ಶ್ರೀ ದೌಲತ್ ಸಾಬ್ ಬಿನ್‌ಮಹಮ್ಮದ್ ಹುಸೇನ | 4,800/- |

ಮುಂದುವರೆದು ಚೆಕ್ ಮೂಲಕ ಹಣ ಪಡೆದಿರುವ 07 ಜನ ಸದಸ್ಯರ ಹೆಸರುಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರಸಂ | ವಿವರ | ರೂಪಾಯಿಗಳು |
|---|---|---|
| 1 | ಶ್ರೀಮತಿ ಮಹಾಂತಮ್ಮ ಅಧ್ಯಕ್ಷರು | 4,500/-. |
| 2 | ಶ್ರೀಮತಿ ಯಲ್ಲಮ್ಮ ಉಪಾಧ್ಯಕ್ಷರು | 4,900/-. |
| 3 | ಶ್ರೀಮತಿ ಪಾರ್ವತಮ್ಮ | 4,900/-. |
| 4 | ಶ್ರೀಮತಿ ಅಮೀನಾ ಬೇಗಂ | 4,500/-. |
| 5 | ಶ್ರೀಮತಿ ಸುಜಾತ | 8,900/-. |
| 6 | ಶ್ರೀಮತಿ ಹುಲಿಗೆಮ್ಮ | 8,900/-. |
| 7 | ಶ್ರೀಮತಿ ಸುಶೀಲಮ್ಮ | 6,100/-. |

ಮೇಲೆ ತಿಳಿಸಿರುವಂತೆ ಅಂದರೆ, ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿ ಹಣ ದುರುಪಯೋಗ ಇತ್ಯಾದಿ ಆರೋಪಗಳು ಮಾಡಿರುವುದರಿಂದ ಇವರುಗಳ ಮೇಲೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(1)(V) ಮತ್ತು 48(4)ನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದರಿಂದ ಇವರುಗಳನ್ನು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ಸದಸ್ಯ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/705/ಗ್ರಾಪಂಅ/2019**
**ಬೆಂಗಳೂರು, ದಿನಾಂಕ:-26-12-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ, ಬಿಚ್ಚಾಲಿ ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರಾದ **1) ಶ್ರೀಮತಿ ಸುಜಾತ 2) ವೀರನ ಗೌಡ 3) ಶ್ರೀಮತಿ ಕಾಮಕ್ಷಮ್ಮ 4) ಶ್ರೀ ಮಲ್ಲೇಶ್ 5) ದೌಲತ್ ಸಾಬ್ 6) ಶ್ರೀ ಹನುಮಂತ 7) ಶ್ರೀ ಕರಿಬಸಪ್ಪ 8) ಶ್ರೀಮತಿ ಸುಶೀಲಮ್ಮ 9) ಶ್ರೀಮತಿ ಜಯಶೀಲ 10) ಶ್ರೀ ರಮೇಶ್ 11) ಶ್ರೀಮತಿ ಅಮೀನಾ ಬೇಗಂ 12) ಶ್ರೀಮತಿ ಪಾರ್ವತಮ್ಮ 13) ಶ್ರೀಮತಿ ಹುಲಿಗೆಮ್ಮ ಮತ್ತು 14) ಶ್ರೀಮತಿ ಯಲ್ಲಮ್ಮ ಉಪಾಧ್ಯಕ್ಷರು 15) ಶ್ರೀಮತಿ ಮಹಾಂತಮ್ಮ ಅಧ್ಯಕ್ಷರು**, ಇವರುಗಳ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುವುದರಿಂದ ಮತ್ತು ಹಣ

ದುರುಪಯೋಗ ಮಾಡಿರುವುದು ರುಜುವಾತಾಗಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ)ರಡಿಯಲ್ಲಿ ಇವರುಗಳ ಸದಸ್ಯತ್ವವನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದುಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

26/12/15

(ರಮೇಶ್ ಡಿ.ಜಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

26/12

<u>ಗೆ,</u>

1. ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು ಕಲಬುರಗಿ ವಿಭಾಗ, ಕಲಬುರಗಿ.
2. ಜಿಲ್ಲಾಧಿಕಾರಿ, ರಾಯಚೂರು ಜಿಲ್ಲೆ, ರಾಯಚೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಯಚೂರು.
4. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ರಾಯಚೂರು, ರಾಯಚೂರು ಜಿಲ್ಲೆ.
5. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಿಚ್ಚಾಲಿ ಗ್ರಾಮ ಪಂಚಾಯಿತಿ, ರಾಯಚೂರು ಜಿಲ್ಲೆ.
   <u>ಮತ್ತು (ಈ ಪ್ರಕರಣಕ್ಕೆ ಸಂಬಂಧಿಸಿದ ಕೆಳಕಂಡ ಸದಸ್ಯರುಗಳಿಗೆ ಈ ಆದೇಶ ಜಾರಿಮಾಡಿ, ಸ್ವೀಕೃತಿ ಪಡೆದು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ).</u>
   **1) ಶ್ರೀಮತಿ ಸುಜಾತ 2) ವೀರನ ಗೌಡ 3) ಶ್ರೀಮತಿ ಕಾಮಕ್ಷಮ್ಮ 4) ಶ್ರೀ ಮಲ್ಲೇಶ್ 5) ದೌಲತ್ ಸಾಬ್ 6) ಶ್ರೀ ಹನುಮಂತ 7) ಶ್ರೀ ಕರಿಬಸಪ್ಪ 8) ಶ್ರೀಮತಿ ಸುಶೀಲಮ್ಮ 9) ಶ್ರೀಮತಿ ಜಯಶೀಲ 10) ಶ್ರೀ ರಮೇಶ್ 11) ಶ್ರೀಮತಿ ಅಮೀನಾ ಬೇಗಂ 12) ಶ್ರೀಮತಿ ಪಾರ್ವತಮ್ಮ 13) ಶ್ರೀಮತಿ ಹುಲಿಗೆಮ್ಮ ಮತ್ತು 14) ಶ್ರೀಮತಿ ಯಲ್ಲಮ್ಮ ಉಪಾಧ್ಯಕ್ಷರು 15)ಶ್ರೀಮತಿ ಮಹಾಂತಮ್ಮ ಅಧ್ಯಕ್ಷರು.**

6. ಶಾಖಾ ರಕ್ಷಾ ಕಡತ/ಗಣಕಕೋಶ/ಹೆಚ್ಚುವರಿ/ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌದ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ.